ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೨೭

# ಕರ್ನಾಟಕ ವಿಧಾನ ಪರಿಷತ್ತು

## ನೂರ ಇಪ್ಪತ್ತೈದನೆಯ ಅಧಿವೇಶನ

## ಬುಧವಾರ, ದಿನಾಂಕ: ೩೦ನೇ ಜುಲೈ ೨೦೧೪

---

## ಸಮೂಹ – III

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

---

## ಕೃಷಿ ಯೋಗ್ಯ, ನೀರಾವರಿ ಮತ್ತು ಮಳೆ ಆಧಾರಿತ ಜಮೀನಿನ ವಿಸ್ತೀರ್ಣ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) –**

೩೯೧ (೨೧೬೬) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇರುವ ಜಮೀನಿನ ವಿಸ್ತೀರ್ಣ ಎಷ್ಟು ; ಅದರ ಪೈಕಿ ಕೃಷಿ ಯೋಗ್ಯ ಜಮೀನು ಎಷ್ಟು ; ನೀರಾವರಿ ಮತ್ತು ಮಳೆಯ ಆಧಾರಿತ ಜಮೀನಿನ ತಾಲ್ಲೂಕುವಾರು ಮಾಹಿತಿ ನೀಡುವುದು ;

(ಆ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಆಗಿರುವ ಮಳೆಯ ಪ್ರಮಾಣ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು) ಈ ವರ್ಷ ವೈಜ್ಞಾನಿಕವಾಗಿ

ಅಂದಾಜು ಮಾಡಲಾಗಿರುವ ಮಳೆಯ ಪ್ರಮಾಣ ಎಷ್ಟು ; ಮಳೆಯ ಕೊರತೆ ನೀಗಿಸಲು ಕೃತಕವಾಗಿ ಮಳೆಯನ್ನು ತರಿಸಲು ಸರ್ಕಾರ ಉದ್ದೇಶಿಸಿದೆಯೇ ; ಹಾಗಿದ್ದಲ್ಲಿ, ಇದಕ್ಕೆ ಮೀಸಲಿಟ್ಟಿರುವ ಹಣ ಎಷ್ಟು ;

(ಇ) ರಾಜ್ಯದಲ್ಲಿರುವ ಎಲ್ಲಾ ಪಂಚಾಯಿತಿಗಳಲ್ಲಿರುವ ಭೂಮಿಯಲ್ಲಿನ ಅಂತರ್ಜಲ ಮಟ್ಟ ಎಷ್ಟು ? (ಮಾಹಿತಿ ನೀಡುವುದು)

## ಮಲ್ಲೇನಹಳ್ಳಿ ಗ್ರಾಮದ ಕೆರೆ ಅಭಿವೃದ್ಧಿ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ)** (**ನಾಮನಿರ್ದೇಶನ ಹೊಂದಿದವರು**) –

೩೯೨ (೨೧೯೫) ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುರುವೇಕೆರೆ ತಾಲ್ಲೂಕು ಮಾಯಸಂದ್ರ ಹೋಬಳಿ, ಮಲ್ಲೇನಹಳ್ಳಿ ಕೆರೆ ಯಾವುದೇ ಅಭಿವೃದ್ಧಿಯಾಗದೆ ರೈತಾಪಿ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಕೆರೆಗೆ ಶಿಂಷಾ ನದಿಯಿಂದ ನೀರೆತ್ತಲು ಲಿಫ್ಟ್ ಇರಿಗೇಷನ್ ಯಾವಾಗ ಮಾಡಲಾಯಿತು ; ಇದರ ಪರಿಸ್ಥಿತಿ ಏನು ; (ವಿವರ ಕೊಡುವುದು)

(ಇ) ಮಲ್ಲೇನಹಳ್ಳಿ ಕೆರೆಯಲ್ಲಿ ಹೂಳು ತುಂಬಿದ್ದು, ಹೂಳೆತ್ತಲು ಇಲಾಖೆ ತೆಗೆದುಕೊಂಡಿರುವ ಕಾರ್ಯಕ್ರಮವೇನು ; ಇದಕ್ಕೆ ಅನುದಾನ ಬಿಡುಗಡೆ ಮಾಡಲಾಗಿದೆಯೇ ;

(ಈ) ಹಾಗಿದ್ದಲ್ಲಿ, ಈ ವರ್ಷ ಕೆರೆ ಒಣಗಿರುವುದರಿಂದ ಹೂಳೆತ್ತುವ ಕಾರ್ಯಕ್ರಮಕ್ಕೆ ಅನುದಾನ ಬಿಡುಗಡೆ ಮಾಡಲಾಗುವುದೇ ?

## ಏತ ನೀರಾವರಿ ಯೋಜನೆಗಳು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ** (**ಸ್ಥಳೀಯ ಸಂಸ್ಥೆಗಳ ಕ್ಷೇತ್ರ**) –

೩೯೩ (೨೨೦೨) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯಿಂದ ಕೈಗೊಂಡ ಏತ ನೀರಾವರಿ ಯೋಜನೆಗಳು ಎಷ್ಟು ; ಇವುಗಳಲ್ಲಿ ಕೆಲವು ಯೋಜನೆಗಳು ಕಾರ್ಯ ನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ೦೫ ವರ್ಷದಿಂದ ಅಂದರೆ ಸನ್ ೨೦೦೯ರಿಂದ ಇಲ್ಲಿಯವರೆಗೆ ಕೈಗೊಂಡ ಏತ ನೀರಾವರಿ ಯೋಜನೆಗಳು ಎಷ್ಟು ;

(ಇ) ಈ ಏತ ನೀರಾವರಿ ಯೋಜನೆಗಳಿಂದ ನೀರಾವರಿಗೆ ಒಳಪಟ್ಟ ಕ್ಷೇತ್ರವೆಷ್ಟು ;

(ಈ) ಸದರಿ ಏತ ನೀರಾವರಿ ಯೋಜನೆಗಳಿಗೆ ಮಾಡಿದ ಖರ್ಚು–ವೆಚ್ಚ ಎಷ್ಟು ;

(ಉ) ಕಳೆದ ೦೫ ವರ್ಷದಿಂದ ಕೈಗೆತ್ತಿಕೊಂಡ ಯೋಜನೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮತ್ತು ಕಾರ್ಯ ನಿರ್ವಹಿಸದೇ ಇರುವ ಏತ ನೀರಾವರಿ ಯೋಜನೆಗಳು ಎಷ್ಟು ?

## ಶಿವಯೋಗಿ ಮಂದಿರದಲ್ಲಿ ಗ್ರಾಮೀಣ ಕ್ರೀಡಾಂಗಣ ನಿರ್ಮಾಣ

**ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೩೯೪ (೨೧೬೪) ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಜಿಲ್ಲೆಯ ಬಾದಾಮಿ ಎಕ್ಸ್‌ಟೆನ್‌ಷನ್ ಏರಿಯಾದ ಸಮೀಪವಿರುವ ಶಿವಯೋಗಮಂದಿರದಲ್ಲಿ ಗ್ರಾಮೀಣ ಕ್ರೀಡಾಂಗಣ ಕಟ್ಟಲು ಮನವಿಗಳು ಬಂದಿವೆಯೇ ; ಹಾಗೂ ಬಾದಾಮಿಯಲ್ಲಿ ಕ್ರೀಡಾಂಗಣ ಕಟ್ಟಲು ಎಂಟು ಎಕರೆ ಜಮೀನು ಲಭ್ಯವಿಲ್ಲದ ಸಂಗತಿ ನಿಜವೇ ;

(ಆ) ಈ ಶಿವಯೋಗಮಂದಿರದಲ್ಲಿ ಶ್ರೀ ಮದ್ವೀರಶೈವ ಶಿವಯೋಗಮಂದಿರ ಟ್ರಸ್ಟ್ ಕಮಿಟಿಯವರು ಎಂಟು ಎಕರೆ ಜಾಗವನ್ನು ಕ್ರೀಡಾಂಗಣ ಕಟ್ಟಲು, ಕೊಡಲು ಸಿದ್ಧರಿದ್ದು, ಅಲ್ಲಿ ಕ್ರೀಡಾಂಗಣ ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ ;

(ಇ) ಶಿವಯೋಗಮಂದಿರದಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳಿರುವುದರಿಂದ ಬಾಗಲಕೋಟೆ ಜಿಲ್ಲೆಯ ಎಲ್ಲಾ ವಾರ್ಷಿಕ ಕ್ರೀಡಾಕೂಟಗಳು ಶಿವಯೋಗಮಂದಿರದಲ್ಲಿಯೇ ನಡೆಯುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಪ್ರವಾಸೋದ್ಯಮ ಇಲಾಖೆಯವರು ವಿದ್ಯಾರ್ಥಿಗಳ ಸಲುವಾಗಿ ಒಂದು ಕೋಟಿ ಐವತ್ತು ಲಕ್ಷ ರೂ. ಗಳನ್ನು ಖರ್ಚು ಮಾಡಿ ಯಾತ್ರಿ ನಿವಾಸ ಕಟ್ಟಿದ್ದು, ಇಲ್ಲಿ ಇರಡು ನೂರು ಜನರಿಗೆ ವಾಸ್ತವ್ಯ ಮಾಡಲು ಅವಕಾಶವಿದ್ದ ಸಂಗತಿ ಹಾಗೂ ಮುಜರಾಯಿ ಇಲಾಖೆಯವರು ಮೂರು ಕೋಟಿ ರೂ. ಗಳನ್ನು ಖರ್ಚು ಮಾಡಿ ಎಪ್ಪತ್ತೈದು ಕೊಠಡಿಗಳ ಪ್ರವಾಸ ಮಂದಿರ ಕಟ್ಟಿದ್ದು, ಅಲ್ಲಿ ಆಟಗಾರರಿಗೆ ಇರಲು ಅನುಕೂಲತೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಶಿವಯೋಗಮಂದಿರದಲ್ಲಿ ಎಂಟು ಎಕರೆ ಜಮೀನು ಲಭ್ಯವಿದ್ದು, ಆಟಗಾರರಿಗೆ ಇರಲು ಸೌಕರ್ಯ ಹಾಗೂ ಎಲ್ಲಾ ಮೂಲಭೂತ ಸೌಲಭ್ಯ ಇರುವುದರಿಂದ ಈಗಾಗಲೇ ಮಾಡಿದ ಆದೇಶವನ್ನು ಪುನರ್ ಪರಿಶೀಲಿಸಿ ಉತ್ತರ ಕರ್ನಾಟಕದ ಆಟಗಾರರಿಗೆ ಅನುಕೂಲ ಮಾಡಿಕೊಡಲು ಕ್ರಮ ಕೈಗೊಳ್ಳಲಾಗುವುದೇ ?

## ನೀರಾವರಿ ನಿಗಮಗಳಲ್ಲಿ ಕೈಗೆತ್ತಿಕೊಳ್ಳಲಾಗಿರುವ ಹೊಸ ಯೋಜನೆಗಳು

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೩೯೫ (೨೧೯೦) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ನೀರಾವರಿ ನಿಗಮಗಳ ಸಂಖ್ಯೆ ಎಷ್ಟು ; ಅವು ಯಾವುವು ; (ವಿವರಗಳೊಡನೆ)

(ಆ) ಸದರಿ ನೀರಾವರಿ ನಿಗಮಗಳಿಗೆ ೨೦೧೩–೧೪ನೇ ಸಾಲಿನ ಆಯವ್ಯಯದಲ್ಲಿ ಎಷ್ಟು ಮೊತ್ತವನ್ನು ಒದಗಿಸಲಾಗಿದೆ ; (ನಿಗಮವಾರು ವಿವರ ನೀಡುವುದು)

(ಇ) ನಿಗಮಗಳಿಗೆ ಸದರಿ ಸಾಲಿನಲ್ಲಿ ಕಾಮಗಾರಿ ಸಂಬಂಧ ಹಾಗೂ ಇತರೆ ವೆಚ್ಚಗಳಿಗಾಗಿ ಎಷ್ಟು ಮೊತ್ತವನ್ನು ನೀಡಲಾಗಿದೆ ; (ನಿಗಮವಾರು ವಿವರ ನೀಡುವುದು)

(ಈ) ಸದರಿ ಸಾಲಿನಲ್ಲಿ ನಿಗಮಗಳ ವ್ಯಾಪ್ತಿಯಲ್ಲಿ ಹೊಸದಾಗಿ ಕೈಗೆತ್ತಿಕೊಳ್ಳಲಾಗಿರುವ ಯೋಜನೆಗಳು ಯಾವುವು ; ಸದರಿ ಯೋಜನೆಗಳ ಅಂದಾಜು ಮೊತ್ತವೆಷ್ಟು ; ಕಾಮಗಾರಿಗಳು ಯಾವ ಹಂತದಲ್ಲಿವೆ ? (ನಿಗಮವಾರು ಪೂರ್ಣ ವಿವರ ನೀಡುವುದು)

## ಭೂಸರ್ವೇಯಿಂದ ಭೂ ವಿಭಜನೆ

**ಡಾ|| ಜೈಮಾಲಾ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೩೯೬ (೨೧೭೭) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಭೂ ಸರ್ವೇ ನಡೆದಿದ್ದು ಯಾವಾಗ ;

(ಆ) ಪ್ರತಿ ೧೦ ವರ್ಷಕ್ಕೊಮ್ಮೆ ಸರ್ವೇ ಕಾರ್ಯ ಮಾಡಬೇಕೆಂಬ ನಿಯಮ ರೂಪಿಸಲಾಗಿದೆಯೇ ; ಹಾಗೆ ರೂಪಿಸಿದ್ದರೆ, ರಾಜ್ಯಾದ್ಯಂತ ಕೊನೆಯ ಸರ್ವೇ ಕಾರ್ಯ ಯಾವಾಗ ನಡೆಯಿತು ;

(ಇ) ಸರ್ವೇಯನ್ನು ಖಾಸಗಿಯವರ ಸಹಭಾಗಿತ್ವದಲ್ಲಿ ಮಾಡಲಾಗುತ್ತಿದೆಯೇ ಅಥವಾ ಸರ್ಕಾರವೇ ಮಾಡುತ್ತಿದೆಯೇ ;

(ಈ) ಸರ್ವೇ ಕಾರ್ಯವು ಮುಗಿದಿದ್ದರೆ, ಅದರ ವರದಿಗಳನ್ನು ಸಾರ್ವಜನಿಕರಿಗೆ ಕೊಡಲಾಗುತ್ತಿದೆಯೇ ;

(ಉ) ಸರ್ವೇ ಮಾಡಿದ್ದರೆ, ಅವರು ರಾಜ್ಯದ ಒಟ್ಟಾರೆ ಜಮೀನನ್ನು (ಅರಣ್ಯ ಹಾಗೂ ಕಂದಾಯ) ಹೇಗೆ ವಿಭಜನೆ ಮಾಡಲಾಗಿದೆ ?

## ಮೃಗಾಲಯದಲ್ಲಿ ಸಾವಿಗೀಡಾಗುತ್ತಿರುವ ವನ್ಯ ಮೃಗಗಳು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೭ (೨೧೪೯) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೩ ವರ್ಷಗಳಿಂದ ಮೈಸೂರಿನಲ್ಲಿರುವ ಶ್ರೀ ಚಾಮರಾಜೇಂದ್ರ ಮೃಗಾಲಯದಲ್ಲಿ ಎಷ್ಟು ಪ್ರಾಣಿ ಪಕ್ಷಿಗಳು ಹಾಗೂ ಮೃಗಗಳು ಸಾವಿಗೀಡಾಗಿವೆ ;

(ಆ) ಯಾವ-ಯಾವ ಕಾರಣಗಳಿಗಾಗಿ ಪ್ರಾಣಿ ಪಕ್ಷಿಗಳು, ಮೃಗಗಳು ಹಾಗೂ ವನ್ಯ ಜೀವಿಗಳು ಸಾವಿಗೀಡಾಗಿವೆ ;

(ಇ) ಪ್ರಸ್ತುತ ಈ ವನ್ಯ ಮೃಗಾಲಯದಲ್ಲಿರುವ ಪ್ರಾಣಿ ಪಕ್ಷಿಗಳು ಹಾಗೂ ಮೃಗಗಳ ಸಂಖ್ಯೆ ಎಷ್ಟು ; ಸಂಪೂರ್ಣ ವಿವರ ನೀಡುವುದು ;

(ಈ) ಈ ವನ್ಯ ಮೃಗಾಲಯದಲ್ಲಿ ವನ್ಯಜೀವಿಗಳನ್ನು ನೋಡಿಕೊಳ್ಳುವ ಸಿಬ್ಬಂದಿಗಳೆಷ್ಟು ; (ವಿವರ ನೀಡುವುದು)

(ಉ) ಸಿಬ್ಬಂದಿಗಳ ಕೊರತೆಯಿಂದ ವನ್ಯ ಮೃಗಾಲಯದಲ್ಲಿ ವನ್ಯ ಜೀವಿಗಳ ನಿರ್ವಹಣೆ ಸರಿಯಾಗಿ ಮಾಡಲಾಗದೇ ವನ್ಯ ಜೀವಿಗಳು ಸಾವಿಗೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಗ್ರಾಮೀಣ ಪ್ರದೇಶದ ಐ.ಟಿ.ಐ. ಗಳಲ್ಲಿ ಸಿಬ್ಬಂದಿ ಕೊರತೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೩೯೮ (೨೧೩೮) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣ ಪ್ರದೇಶದ I.T.I. ಗಳಲ್ಲಿ ಸಿಬ್ಬಂದಿ ಕೊರತೆಯಿಂದಾಗಿ ತರಬೇತಿಯು ಸರಿಯಾಗಿ ನಡೆಯದೆ ತರಬೇತಿದಾರರು ವೃತ್ತಿ ಕೌಶಲ್ಯದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕಿದೆಯೇ;

(ಆ) ಹಾಗಿದ್ದಲ್ಲಿ, ರಾಜ್ಯದ ಎಲ್ಲಾ ಗ್ರಾಮೀಣ ಪ್ರದೇಶಗಳ ಐ.ಟಿ.ಐ.ಗಳ ಹೆಸರು ಮತ್ತು ಅನುಷ್ಠಾನಗೊಂಡಿರುವ ವೃತ್ತಿ/ಘಟಕಗಳು, ಮಂಜೂರಾದ ಹುದ್ದೆಗಳು, ಭರ್ತಿಯಾದ ಹುದ್ದೆಗಳ ವಿವರಗಳನ್ನು ಐ.ಟಿ.ಐ. ವಾರು ಸಲ್ಲಿಸುವುದು ;

(ಇ) ಗ್ರಾಮೀಣ ಪ್ರದೇಶದ I.T.I. ಗಳಿಗೆ ವರ್ಗಾವಣೆಯಾದರೂ ಪುನಃ ನಿಯೋಜನೆ ಮೇರೆಗೆ ನಗರ ಪ್ರದೇಶಗಳಲ್ಲಿ ವಿಶೇಷವಾಗಿ ನಿರ್ದೇಶನಾಲಯ, ವಿಭಾಗೀಯ ಕಛೇರಿಗಳು, ಬೆಂಗಳೂರು ಮುಂತಾದ ಮಹಾನಗರಗಳ ಐ.ಟಿ.ಐ.ಗಳಲ್ಲಿ ಹೆಚ್ಚುವರಿಯಾಗಿ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕಿದೆಯೇ ;

(ಈ) ಹಾಗಿದ್ದಲ್ಲಿ, ಮಾತೃ ಸಂಸ್ಥೆಯಿಂದ ಬೇರೆ ಬೇರೆ ಸಂಸ್ಥೆಗಳಿಗೆ/ಕಛೇರಿಗಳಿಗೆ ನಿಯೋಜನೆಗೊಂಡು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ? (ವಿವರಗಳನ್ನು ಐ.ಟಿ.ಐ. ವಾರು ಒದಗಿಸುವುದು)

## ವಸತಿ ಮತ್ತು ಹಕ್ಕುಪತ್ರ ನೀಡುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೯ (೨೧೯೭) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆ/ತಾಲ್ಲೂಕಿನ ಕೋಟ ಕನ್ಯಾನ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೋಡಿತಲೆ ಮತ್ತು ಹೊಸಬೇಂಗ್ರೆ ಪ್ರದೇಶಗಳಲ್ಲಿ ಸುಮಾರು ೪೦೦ಕ್ಕೂ ಹೆಚ್ಚು ಮೀನುಗಾರಿಕಾ ಕುಟುಂಬಗಳಿಗೆ ಅವರ ವಸತಿ ಹಕ್ಕು ಪತ್ರ ನೀಡಲು ಸರ್ಕಾರ ವಿಳಂಬ ಮಾಡುತ್ತಿರುವುದೇಕೆ ; (ಪೂರ್ಣ ವಿವರ ನೀಡುವುದು)

(ಆ) ಸದರಿ ಕುಟುಂಬಗಳಿಗೆ ಹಕ್ಕು ಪತ್ರ ನೀಡುವ ಬಗ್ಗೆ ಈ ಹಿಂದಿನ ಸರ್ಕಾರದ ಸಚಿವ ಸಂಪುಟದಲ್ಲಿ ಅನುಮೋದನೆ ನೀಡಿದ್ದರೂ, ಮೀನುಗಾರಿಕಾ ಕುಟುಂಬಗಳಿಗೆ ಎಂದು ಹಕ್ಕುಪತ್ರ ನೀಡುವಿರಿ ; (ಪೂರ್ಣ ವಿವರ ನೀಡುವುದು)

(ಇ) ಸದರಿ ಭೂಪ್ರದೇಶವು ಕರಾವಳಿ ವಲಯ ನಿಯಂತ್ರಣಾ ಪ್ರಾಧಿಕಾರಕ್ಕೆ ಒಳಪಡುತ್ತಿದ್ದರೂ, ಈ ಹಿಂದಿನ ಸರ್ಕಾರದ ಸಚಿವ ಸಂಪುಟದಲ್ಲಿ ಅನುಮೋದನೆ ನೀಡಿರುವುದರಿಂದ ನಿಯಮಗಳ ಗೊಂದಲ ನಿವಾರಣೆಯಾಗಿರುವುದರಿಂದ ಹಕ್ಕು ಪತ್ರ ನೀಡದಿರಲು ಕಾರಣವೇನು ?

## ಜಿಂಕೆಗಳ ಹಾವಳಿ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೦ (೨೧೭೯) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿ ಜಿಂಕೆ ಹಾವಳಿಯಿಂದ ರೈತರು ಕಂಗಾಲಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸರ್ಕಾರ ಜಿಂಕೆಗಳ ಹಾವಳಿಯಿಂದ ರೈತರ ಬೆಳೆಗಳನ್ನು ರಕ್ಷಿಸಲು ಇದುವರೆಗೂ ಕೈಗೊಂಡ ಕ್ರಮಗಳೇನು ;

(ಇ) ಜಿಲ್ಲೆಯಲ್ಲಿ ಇದುವರೆಗೂ ರೈತರಿಗೆ ವಿತರಿಸಲಾದ ಪರಿಹಾರದ ಮೊತ್ತ ಎಷ್ಟು ; ಗರಿಷ್ಠ ಮತ್ತು ಕನಿಷ್ಠ ಪ್ರಮಾಣ ಎಷ್ಟು ;

(ಈ) ಜಿಂಕೆ ಹಾವಳಿಗೆ ತುತ್ತಾದ ಪರಿಹಾರವನ್ನು ಯಾವ ರೀತಿಯಾಗಿ ವಿತರಿಸಲಾಗುತ್ತಿದೆ ; ಒಂದು ಎಕರೆಯಲ್ಲಿ ಬೆಳೆದ ಬೆಳೆ ನಾಶಕ್ಕೆ ನೀಡಲಾಗುತ್ತಿರುವ ಪರಿಹಾರ ಧನ ಎಷ್ಟು ;

(ಉ) ೨೦೧೩–೧೪ ರಿಂದ ೨೦೧೪–೧೫ನೇ ಸಾಲಿನವರೆಗೂ ಕೊಪ್ಪಳ ಜಿಲ್ಲೆಯಲ್ಲಿ ಪರಿಹಾರ ನೀಡುವಂತೆ ಕೋರಿ ಸ್ವೀಕೃತವಾದ ಅರ್ಜಿಗಳು ಎಷ್ಟು ; ಸದರಿ ಅರ್ಜಿಗಳಲ್ಲಿ ಪರಿಹಾರ ನೀಡಲಾದ, ನೀಡದಿರುವ ವಿವರಗಳನ್ನು ತಾಲ್ಲೂಕುವಾರು ನೀಡುವುದು ;

(ಊ) ಜಿಂಕೆಗಳನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು ?

## ಕೃಷ್ಣಾ ಮತ್ತು ಗೋದಾವರಿ ಕಣಿವೆಯಲ್ಲಿ ಕೈಗೊಂಡಿರುವ ನೀರಾವರಿ ಯೋಜನೆಗಳು

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೪೦೧ (೨೧೪೩) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷ್ಣಾ ಮತ್ತು ಗೋದಾವರಿ ಕಣಿವೆಯಲ್ಲಿ ಕೈಗೊಂಡಿರುವ ನೀರಾವರಿ ಯೋಜನೆಗಳು ಯಾವುವು ; (ಸಂಪೂರ್ಣ ವಿವರ ನೀಡುವುದು) ಅಣೆಕಟ್ಟು ಮಾಹಿತಿ, ಯೋಜನಾ ವೆಚ್ಚ, ನೀರು ಸಂಗ್ರಹ, ಎಕರೆವಾರು ನೀರಾವರಿ ಕ್ಷೇತ್ರ ಹಾಗೂ ಕಾಲುವೆಗಳ ಉದ್ದ)

(ಆ) ಪ್ರಸ್ತುತ ಈ ಮೇಲ್ಕಂಡ ಯೋಜನೆಗಳ ಅಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಪ್ರಗತಿ ವಿವರ ಹಾಗೂ ವೆಚ್ಚ ಎಷ್ಟು ; (ಅಣೆಕಟ್ಟು ಮಾಹಿತಿ, ಯೋಜನಾ ವೆಚ್ಚ, ನೀರು ಸಂಗ್ರಹ, ಎಕರೆವಾರು ನೀರಾವರಿ ಕ್ಷೇತ್ರ ಹಾಗೂ ಕಾಲುವೆಗಳ ಉದ್ದ)

(ಇ) ಈ ಮೇಲಿನ ಯೋಜನೆಗಳಿಗೆ ದುರಸ್ತಿ, ನಿರ್ವಹಣೆ ಹಾಗೂ ಆಧುನೀಕರಣಕ್ಕಾಗಿ ಕೈಗೊಂಡಿರುವ ವೆಚ್ಚ ಎಷ್ಟು ; (ಯೋಜನಾವಾರು, ಕಾಲುವೆ ಉದ್ದವಾರು ವಿವರ ನೀಡುವುದು )

(ಈ) ಈ ಮೇಲ್ಕಂಡ ಯೋಜನೆಗಳ ಅಡಿಯಲ್ಲಿ ಭೌತಿಕವಾಗಿ ಎಷ್ಟು ರೈತರ, ಎಷ್ಟು ಎಕರೆ ಹೊಲಗಳಿಗೆ ನೀರನ್ನು ಒದಗಿಸಲಾಗಿದೆ ;

(ಉ) ನ್ಯಾಯಾಧಿಕರಣಗಳ ತೀರ್ಪಿನ ಅಡಿಯಲ್ಲಿ ಯಾವ ಕಾಲಮಿತಿಯೊಳಗೆ ಈ ಮೇಲ್ಕಂಡ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು ; ಪ್ರಸ್ತುತ ಆಗಿರುವ ಭೌತಿಕ ಪ್ರಗತಿ ಎಷ್ಟು ; ಇನ್ನೂ ಎಷ್ಟು ಕಾಲಮಿತಿಯೊಳಗೆ ರೈತರ ಹೊಲಗಳಿಗೆ ನೀರು ಹರಿಸಲಾಗುವುದು ?

## ಕಾಲುವೆ ನಿರ್ಮಾಣಕ್ಕಾಗಿ ಭೂಮಿ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೨ (೨೧೯೪) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭದ್ರಾ ಜಲಾಶಯದಿಂದ ಚಿತ್ರದುರ್ಗಕ್ಕೆ ನೀರು ತರುವಲ್ಲಿ ನಿರ್ಮಿಸುತ್ತಿರುವ ಮುಖ್ಯ ಕಾಲುವೆ ನಿರ್ಮಾಣ ಕಾಮಗಾರಿಗೆ ಒಳಪಡುವ ಭೂಮಿ ಅರಣ್ಯ ಇಲಾಖೆಗೆ ಒಳಪಟ್ಟಿದ್ದು ಅದನ್ನು ನೀಡಬೇಕೆಂದು ಎರಡು ವರ್ಷಗಳ

ಹಿಂದೆ ಪ್ರಸ್ತಾವನೆ ಸಲ್ಲಿಸಿದ್ದು ಇದುವರೆವಿಗೂ ಅರಣ್ಯ ಇಲಾಖೆಯ ಪ್ರಸ್ತಾವನೆಗೆ ಅನುಮೋದನೆ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಅರಣ್ಯ ಇಲಾಖೆ ಈ ಪ್ರಸ್ತಾವನೆಗೆ ಅನುಮೋದನೆ ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು ? (ಪೂರ್ಣ ವಿವರ ನೀಡುವುದು)

## ಅರಣ್ಯ ಇಲಾಖಾ ಯೋಜನೆಯಡಿ ಕಾಮಗಾರಿಗಳು

**ಶ್ರೀ ಐವಾನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) –**

೪೦೩ (೨೧೫೭) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆ ವತಿಯಿಂದ ಯಾವ ಯಾವ ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; (ವಿಭಾಗವಾರು, ವಲಯವಾರು ಮಾಹಿತಿ ನೀಡುವುದು)

(ಆ) ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗೆ ನೀಡಲಾದ ಅನುದಾನವು ಸಮರ್ಪಕವಾಗಿ ಬಳಕೆಯಾಗುತ್ತಿದೆಯೇ ; (ವಿವರ ನೀಡುವುದು)

(ಇ) ಇಲಾಖೆಯಿಂದ ಜಿಲ್ಲೆಯಲ್ಲಿ ಅರಣ್ಯ ಪಾರ್ಕ್‌ನ್ನು ನಿರ್ಮಿಸಲು ಏನಾದರೂ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆಯೇ ; ಹಾಗಿದ್ದರೆ, ವಿವರ ನೀಡುವುದು ;

(ಈ) ರಾಜ್ಯದಲ್ಲಿ ಎಷ್ಟು ಎಕರೆ ಭೂಮಿಯನ್ನು ಒತ್ತುವರಿ ಮಾಡಲಾಗಿದೆ ? (ವಿವರ ನೀಡುವುದು)

## ಅಸಂಘಟಿತ ನೌಕರರು

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೪ (೨೧೪೧) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರ್ಮಿಕ ಇಲಾಖೆಯಿಂದ ಅಸಂಘಟಿತ ಕಾರ್ಮಿಕರಿಗೆ ಸರ್ಕಾರ ಹಲವಾರು ನೆರವುಗಳನ್ನು ನೀಡುತ್ತಿರುವುದು ನಿಜವೆ ;

(ಆ) ನಿಜವಾಗಿದ್ದರೆ, ಇಲಾಖೆಯಲ್ಲಿರುವ ಯೋಜನೆಗಳು ಎಷ್ಟು ; ಫಲಾನುಭವಿಗಳು ಅನುಸರಿಸಬೇಕಾದ ಮಾನದಂಡಗಳೇನು ? (ವಿವರ ನೀಡುವುದು)

## ಎತ್ತಿನಹೊಳೆ ಯೋಜನೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೪೦೫ (೨೧೭೩) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಎತ್ತಿನಹೊಳೆ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಈ ಯೋಜನೆಗಾಗಿ ಸರ್ಕಾರ ಒದಗಿಸಲಾಗಿರುವ ಅನುದಾನವೆಷ್ಟು ;

(ಇ) ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು ;

(ಈ) ಈ ಯೋಜನೆಯಿಂದ ಯಾವ–ಯಾವ ಜಿಲ್ಲೆಗಳಿಗೆ ಎಷ್ಟು ಪ್ರಮಾಣದ ನೀರನ್ನು ಪೂರೈಸಲಾಗುವುದು ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಕಾ.ಸೂ. 457, ಪ್ರತಿಗಳು– 1500 – ಪಿ8